

# ಭಾರತದ ಗೌರವ ಹೊಳೆ ದಾಸವಾಳ

**ನದೀ ತೀರಗಳಲ್ಲಿ ಹೆಚ್ಚು ಬೆಳೆಯುವ 'ಹೊಳೆ ದಾಸವಾಳ' ಚೆಲುವಿನಿಂದ ಮಾತ್ರವಲ್ಲ, ತನ್ನ ದೇಹದ ಎಲ್ಲ ಭಾಗಗಳ ಉಪಯುಕ್ತತೆಯಿಂದಲೂ ಗಮನಸೆಳೆಯುತ್ತದೆ.**

■ ಡಾ. ಎಸ್. ಶಿಶುಪಾಲ

ಭಾರತದಲ್ಲಿ ಬೆಳೆಯುವ ಹಲವಾರು ಸಸ್ಯ ಪ್ರಭೇದಗಳು ವಿಶ್ವವಿಖ್ಯಾತಿ ಪಡೆದಿವೆ. ಅದರಲ್ಲೂ ಪಶ್ಚಿಮ ಘಟ್ಟ ಶ್ರೇಣಿಗಳಲ್ಲಿ ಬೆಳೆಯುವ ಗಿಡಮರಗಳು ಅಮೂಲ್ಯವಾದ ಔಷಧಿ ಗುಣಗಳನ್ನು ಹೊಂದಿವೆ. ಅಸಂಖ್ಯ ಸಸ್ಯ ವೈವಿಧ್ಯವನ್ನು ಹೊಂದಿರುವ ಭಾರತದ ಇತರೆ ಪ್ರದೇಶಗಳಲ್ಲಿಯೂ ಬಹು ಉಪಯುಕ್ತ ಮರಗಳಿದ್ದು, ಅಂಥ ವಿಶೇಷ ಸಸ್ಯಪ್ರಭೇದ 'ಹೊಳೆ ದಾಸವಾಳ'.

ನಮ್ಮ ದೇಶದ ನದಿ ತೀರಗಳಲ್ಲಿ ಸಾಮಾನ್ಯವಾಗಿ ಬೆಳೆಯುವ, ಕಣ್ಮನ ಸೆಳೆಯುವ ಹೂಗಳನ್ನು ಹೊಂದಿರುವ ಮರಗಳೇ ಹೊಳೆ ದಾಸವಾಳ. ಅಸ್ಸಾಂ, ದಕ್ಷಿಣ ಭಾರತದ ರಾಜ್ಯಗಳಲ್ಲದೆ, ಶ್ರೀಲಂಕಾ, ಮಯನ್ಮಾರ್, ಚೀನಾ ಮತ್ತು ಆಸ್ಟ್ರೇಲಿಯಾ ದೇಶಗಳಲ್ಲಿ ಬೆಳೆಯುವ ಈ ಮರವನ್ನು 'ಭಾರತದ ಗೌರವ' (**Pride of India**) ಎಂದು ಬಣ್ಣಿಸಲಾಗಿದೆ.

ಹಲವು ವಿಶೇಷಗಳನ್ನು ಹೊಂದಿರುವ ಸಾಮಾನ್ಯ ಗಾತ್ರದ ಮರವಾದ ಇದನ್ನು 'ರಾಣಿ ಹೂ', 'ಮರುವಾಚಲುಮರ' ಮುಂತಾದ ಹೆಸರುಗಳಿಂದಲೂ ಕರೆಯುತ್ತಾರೆ. ಸ್ವೀಡನ್ ದೇಶದ ಸಸ್ಯತಜ್ಞ ಲ್ಯಾಗರ್‌ಸ್ಟ್ರೋಮ್‌ನ ಗೌರವಕ್ಕಾಗಿ ಈ ಮರಕ್ಕೆ ನೀಡಲಾಗಿರುವ ಸಸ್ಯಶಾಸ್ತ್ರೀಯ ಹೆಸರು ಲ್ಯಾಗರ್‌ಸ್ಟ್ರೋಮಿಯಾ ಸ್ಪಿಸಿಯೋಸ (**Lagerstroemia speciosa**). ನಂದಿ ಮತ್ತು ಚೆನ್ನಂಗಿ ಜಾತಿಯ ಮರಗಳು ಇದೇ ಪ್ರಭೇದಕ್ಕೆ ಸೇರುತ್ತವೆ. ಇದು ಸಸ್ಯಗಳ ಲೈಥರೆಸಿ (**Lythraceae**) ಕುಟುಂಬಕ್ಕೆ ಸೇರಿದೆ.

ಬಹಳ ವೇಗವಾಗಿ ಬೆಳೆಯುವ ಎಲೆ ಉದುರುವ ಮರದ ಜಾತಿಗಳಿಗೆ ಇದು ಸೇರುತ್ತದೆ. ಚೆನ್ನಾಗಿ ನೀರಿರುವ ಕಡೆ ಉದ್ದವಾಗಿ ಬೆಳೆಯುತ್ತದೆ. ಮಧ್ಯಮ ಗಾತ್ರದ ಮರ ಸುಮಾರು 20 ಮೀಟರ್‌ವರೆಗೆ ಬೆಳೆಯಬಲ್ಲದು. ಕಾಂಡವು ನುಣುಪಾದ ತಿಳಿಬೂದು ಬಣ್ಣದ ಉದುರುವ ತೊಗಟೆಯನ್ನು ಹೊಂದಿರುತ್ತದೆ. ಫಲವತ್ತಾದ ಭೂಮಿಯಲ್ಲಿ ಎರಡು ವರ್ಷಗಳಲ್ಲೇ ಹೂ ಬಿಡಲು ಪ್ರಾರಂಭಿಸುತ್ತದೆ.

ಮಧ್ಯಮ ಗಾತ್ರದ ಅಂಡಾಕಾರವಾಗಿರುವ ಎಲೆಗಳ ಮಧ್ಯೆ ನರಗಳು ಎದ್ದು ಕಾಣುತ್ತವೆ. ಎಲೆಯ ಮೇಲ್ಭಾಗದ ಮೇಲ್ಮೈ ತಿಳಿ ಹಸಿರು ಬಣ್ಣದ್ದಾಗಿದ್ದು ಕೆಳಗಿನ ಮೇಲ್ಮೈ ಮಾಸಲಾಗಿರುತ್ತದೆ. ಎಲೆಗಳು ಜೊತೆಯಾಗಿ ಗೊಂಚಲಿನಂತೆ ಬೆಳೆಯುತ್ತವೆ. ಸಾಮಾನ್ಯವಾಗಿ ಏಪ್ರಿಲ್ ತಿಂಗಳಿನಲ್ಲಿ ಹೊಸ ಎಲೆಗಳು ಕಾಣಿಸುತ್ತವೆ. ಜನವರಿಯಲ್ಲಿ ಎಲೆಗಳು ಕೆಂಪುಕಂದು ಬಣ್ಣಕ್ಕೆ ತಿರುಗಿ ಬೀಳುವುದಕ್ಕೆ ಪ್ರಾರಂಭಿಸುತ್ತವೆ. ಹೊಸ ಎಲೆಗಳು ಅದಷ್ಟು ಬೇಗನೆ ಬರುವುದರಿಂದ ಮರಗಳು ಯಾವಾಗಲೂ ಬೋಳಾಗಿ ಕಾಣುವುದಿಲ್ಲ.

ಏಪ್ರಿಲ್‌ನಿಂದ ಜೂನ್‌ವರೆಗೆ ಈ ಮರಗಳು ಹೂ ಬಿಡುವ ಕಾಲ. ಕೆಲವು ಸಲ ಮತ್ತೆ ಜೂನ್‌ನಿಂದ ಆಗಸ್ಟ್‌ವರೆಗೆ ಹೊಸ ಹೂಗಳನ್ನು ಕಾಣಬಹುದು. ಉದ್ದನೆಯ ಹೂಗೊಂಚಲುಗಳು ಕೊಂಬೆಗಳ ತುದಿಯಲ್ಲಿ ಬೆಳೆಯುತ್ತವೆ. ತಿಳಿ ಗುಲಾಬಿ ಬಣ್ಣದಿಂದ ನೇರಳೆ ಬಣ್ಣವಿರುವ ಹೂಗಳಲ್ಲಿ ಆರರಿಂದ ಏಳು ದಳಗಳು ಇರುತ್ತವೆ.

ಹೂವಿನ ದಳಗಳು ನೆರಿಗೆಯಂತೆ ಸುಕ್ಕು ಸುಕ್ಕಾಗಿದ್ದು ಆಕರ್ಷಕವಾಗಿರುತ್ತವೆ. ಹೂವಿನ ನಡುವೆ ಹಳದಿ ಬಣ್ಣದ ಪುಷ್ಪಪಾತ್ರೆಯನ್ನು ಕಾಣಬಹುದು. ಈ ಹೂಗಳು ಹಲವಾರು ಕೀಟಗಳನ್ನು ಆಕರ್ಷಿಸುತ್ತವೆ.

ಹೊಳೆ ದಾಸವಾಳ ಮರದ ಗಟ್ಟಿಯಾದ ಗೋಲಿಯಾಕಾರದ ಕಾಯಿಗಳು ಮೊದಲು ಹಸಿರಾಗಿರುತ್ತವೆ. ಕ್ರಮೇಣ ಕಂದು ಮತ್ತು ಕೆಂಪು ಬಣ್ಣಕ್ಕೆ ತಿರುಗುತ್ತವೆ. ಬೀಜಗಳು ಕಂದು ಬಣ್ಣವಿದ್ದು ನಯವಾದ ರೆಕ್ಕೆಯಿರುವುದರಿಂದ ಗಾಳಿಯಲ್ಲಿ ಪ್ರಸರಣಕ್ಕೆ ಸೂಕ್ತವಾಗಿದೆ.

ಈ ಮರವನ್ನು ಅಲಂಕಾರಿಕ ವೃಕ್ಷವಾಗಿ ಉದ್ಯಾನವನಗಳಲ್ಲಿ ಮತ್ತು ರಸ್ತೆ ಬದಿಯಲ್ಲಿ ಬೆಳೆಸುತ್ತಾರೆ. ಎಳೆಯ ಎಲೆಗಳನ್ನು ತರಕಾರಿಯ ತರಹ ಉಪಯೋಗಿಸುವುದುಂಟು. ಬಲಿತ ಎಲೆಗಳು ಮತ್ತು ಹಣ್ಣನ್ನು ಔಷಧಿ ರೂಪದಲ್ಲಿ ಬಳಸಲಾಗುವುದು. ಮುಖ್ಯವಾಗಿ ಕ್ರೋಸೋಲಿಕ್ ಅಮ್ಲ, ಲ್ಯಾಗರ್‌ಸ್ಟ್ರೋನಿನ್, ಫೋಲ್ಸಿನ್, ರೀಜಿನಿನ್ ಮುಂತಾದ ರಾಸಾಯನಿಕಗಳನ್ನು ಈ ಸಸ್ಯದಿಂದ ಬೇರ್ಪಡಿಸಿ ಉಪಯೋಗಿಸುವರು. ಅದರಲ್ಲೂ ಲ್ಯಾಗರ್‌ಸ್ಟ್ರೋನಿನ್ ಸಕ್ಕರೆ ಕಾಯಿಲೆಯ ನಿಯಂತ್ರಣಕ್ಕೆ ಬಳಕೆಯಲ್ಲಿದೆ. ಅಂಡಮಾನ್‌ನಲ್ಲಿ ಜನರು ಬಾಯಿ ಹುಣ್ಣನ್ನು ಹೋಗಲಾಡಿಸಲು ಇದರ ಹಣ್ಣುಗಳನ್ನು ಬಳಸುತ್ತಾರೆ. ಈ ಮರದ ಕಾಂಡವು ಬಹು ಮೌಲ್ಯವುಳ್ಳದ್ದಾಗಿದ್ದು ಕಟ್ಟಡ ಕಟ್ಟಲು ಮತ್ತು ದೋಣಿ ತಯಾರಿಸಲು ಉಪಯೋಗವಾಗುತ್ತಿದೆ.

ಆಕರ್ಷಕ ಹೂಗಳಿಂದಾಗಿ ಇತ್ತೀಚೆಗೆ ಈ ಮರವು ಭಾರತದ ನಗರಗಳಲ್ಲಿ ಜನಪ್ರಿಯವಾಗುತ್ತಿದೆ. ನಗರಗಳ ಉದ್ಯಾನವನಗಳಲ್ಲಿ ಮತ್ತು ನೆಡುತೋಪುಗಳಲ್ಲಿ ಈ ಮರಗಳನ್ನು ಬೆಳೆಸಬಹುದು. ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಅವರಣಗಳಿಗೆ ಈ ಮರಗಳು ಶೋಭಾಯಮಾನವಾಗಬಲ್ಲವು. ■